## ಈ ಕಾಲದ ಕಥನ

ಹೀಗೆ ಕತೆ ಮುಂದುವರಿಯುತ್ತಿದ್ದಾಗ ನಾನೆಲ್ಲೋ ನಿದ್ದೆಗೆ ಜಾರುತ್ತಿದ್ದೆ. ಮರುದಿನ ಬಂಟಮಲೆಯ ಕಾಡಿನೊಳಗೆ ಅಮ್ಮನೊಂದಿಗೆ ಬಿದಿರಕ್ಕಿ ಆಯಲು ಹೋದಾಗ ಕಂಡ ಹಕ್ಕಿಗಳು, ಮರಗಳು, ಚಿಗುರೆಲೆ, ಹಾಸು ಬಂಡೆಗಳು ರಾತ್ರಿಯ ರಾಮನ ಕತೆಯನ್ನು ನೆನಪಿಗೆ ತಂದು ಕಾಡೆಲ್ಲ ರಾಮಾಯಣವಾಗುತ್ತಿತ್ತು.

ಅಮ್ಮನ ತೆಕ್ಕೆಯಿಂದ ಜಾರಿಕೊಂಡು ಅದೆಷ್ಟೋ ವರ್ಷಗಳು ಕಳೆದುವು. ಸುಳ್ಯ ಪರಿಸರದಲ್ಲಿ ಸಂಶೋಧನೆಗೆಂದು ಓಡಾಡುತ್ತಿದ್ದೆ. ಯಾರೋ ಹೇಳಿದರು:

'ಪೂಮಲೆ ಬೆಟ್ಟದ ಬುಡದಲ್ಲಿರುವ ಅಮ್ಮೈಯಲ್ಲಿರುವ ಅಜ್ಜ ಒಳ್ಳೆಯ ಕತೆ ಹೇಳುತ್ತಾರೆ, ಹೋ.' ಒಂದು ದಿನ ಸಾಯಂಕಾಲ ಹೋದೆ.

'ಅಜ್ಜಾ, ಕತೆ ಹೇಳಿ' ಅಂದೆ.

'ಹಾಗೆಲ್ಲ ಹೇಳಲಾಗದು, ಈಗ ಊಟ ಮಾಡಿ ಮಲಗಿ, ಮುಂಜಾನೆ ಕೋಳಿಕೂಗುವ ಹೊತ್ತಿಗೆ ತಯಾರಾಗಿ, ಕತೆ ಹೇಳುತ್ತೇನೆ' ಅಂದರು.

ಸರಿ. ಹಾಗೇ ಮಾಡಿದೆ. ಬೆಳಗ್ಗೆದ್ದು ನೋಡುತ್ತೇನೆ, ಅಜ್ಜ ಆಗಲೇ ಸ್ನಾನ ಮಾಡಿ, ಹಣೆಗೆ ಭಸ್ಮ ಬಳಿದು, ಬಿಳಿ ಬಟ್ಟೆ ಉಟ್ಟುಕೊಂಡು ಕತೆ ಹೇಳಲು ತಯಾರಾಗಿ ಕುಳಿತಿದ್ದರು.

ನಾನು ಅವಕ್ಕಾಗಿದ್ದೆ.

ಅವರು ಹೇಳಿದರು.

'ಏನು ಹಾಗೆ ನೋಡುತ್ತೀರಿ, ಕತೆ ಹೇಳುತ್ತೇನೆ, ಬರ್ಕೊಳ್ಳಿ, ಬರ್ಕೊಳ್ಳಿ.'

ನಾನು ಸಾವರಿಸಿಕೊಂಡು ಬರೆದುಕೊಳ್ಳಲು ತಯಾರಾದೆ. ಅಜ್ಜ ಹೇಳತೊಡಗಿದರು:

'ಓ ಅಲ್ಲಿ ಕಾಣುತ್ತಿದೆಯಲ್ಲ, ಪೂಮಲೆ ಬೆಟ್ಟ, ಅದರ ಹೆಸರು ಹೇಗೆ ಬಂದಿದೆ ಗೊತ್ತೋ?'

'ಇಲ್ಲ.'

'ಹಾಗಾದರೆ ಬರ್ಕೊಳ್ಳಿ.'

'ಸರಿ, ನೀವು ಹೇಳಿ.'

'ಹಿಂದೆ ರಾಮ ದೇವರು, ಲಕ್ಷ್ಮಣ ಮತ್ತು ಸೀತಾ ದೇವಿಯರೊಂದಿಗೆ ವನವಾಸಕ್ಕೆ ಹೋದರು. ಅಲ್ಲಿ ಚಿನ್ನದ ಜಿಂಕೆ ಕಂಡು ಸೀತೆಗೆ ಮೋಹ ಬಂತು. ಅದು ಬೇಕು ಅಂತ ಹಟ ಹಿಡಿದಳು. ಜಿಂಕೆ ಹಿಡಿಯಲು ರಾಮ ದೇವರು ಹೋದರು.

ಎಷ್ಟೊತ್ತಾದರೂ ರಾಮ ಬಾರದ್ದನ್ನು ಕಂಡು ಲಕ್ಷ್ಮಣ ದೇವರೂ ರಾಮನನ್ನು ಹುಡುಕಿಕೊಂಡು ದೂರ ಹೋದರು. ಆಗ ರಾವಣ ಮುನಿ ವೇಷದಲ್ಲಿ ಬಂದು ಸೀತೆಯನ್ನು ಅಪಹರಿಸಿಕೊಂಡು ವಿಮಾನದಲ್ಲಿ ಹೋದ.

ಈಗ ರಾವಣ ತನ್ನನ್ನು ಕದ್ದುಕೊಂಡು ಹೋದ ಎಂದು ರಾಮನಿಗೆ ಸೀತೆ ಹೇಳುವುದು ಹೇಗೆ?

ಅದಕ್ಕೆ ಅವಳು ತನ್ನ ತಲೆಯಲ್ಲಿದ್ದ ಹೂಮಾಲೆಯನ್ನು ತೆಗೆದು ವಿಮಾನದಿಂದ ಕೆಳಕ್ಕೆ ಎಸೆದಳು.

ಹಾಗೆ ಹೂಮಾಲೆ ಬಿದ್ದ ಜಾಗವೇ ಈ ಪೂಮಲೆ ಬೆಟ್ಟ.'

'ಸರಿಯಾಗಿ ಬರ್ಕೊಂಡ್ರಾ ಇಲ್ವಾ?'

'ಬರ್ಕೊಂಡೆ.' ಡಅಜ್ಜ ಕತೆ ಮುಂದರಿಸಿದರು. ಕಾಡಿನಲ್ಲಿ ಸೀತೆ ಮಲ್ಲಿಗೆ ಹೂ ಬೆಳೆಸಿದ್ದು, ಬಂಡೆ ಮೇಲೆ ಕುಳಿತು ಋಷಿಪತ್ನಿಯರಿಗೆ ಕತೆ ಹೇಳಿದ್ದು, ಹಾಸುಗಲ್ಲಿನ ಮೇಲೆ ರಾಮ ತನ್ನ ಪಾದದ ರೇಖೆ ಮೂಡಿಸಿದ್ದು... ಹೀಗೆ ಅದು ಬೆಳೆಯುತ್ತಲೇ ಇತ್ತು. ಅಲ್ಲಿಂದ ಮುಂದೆ ನಾನು ನಡೆದಲ್ಲೆಲ್ಲ ಸೀತೆ ಎಸೆದ ಮಲ್ಲಿಗೆ ಹೂವಿನ ಎಸಳುಗಳು.